ಶ್ರೀ ಬಿ. ಶಿವಣ್ಣ (ವೈದ್ಯಕೀಯ ಶಿಕ್ಷಣ ಸಚಿವರು) :-

ಅ) ಒಬ್ಬ ತಜ್ಞರು (ಮುಖ್ಯ) ಡಾ. ಕೆ ಎಸ್. ಸಿದ್ಧರಾಜು ಇವರ ಜೊತೆ ಇಬ್ಬರು ತರಬೇತಿ ಪಡೆದಿರುವ ವೈದ್ಯಾಧಿಕಾರಿಗಳಾದ ಡಾ. ಎಂ. ಬಸಪ್ಪ ಮತ್ತು ಡಾ. ಕೃಷ್ಣಾ ಮೂರ್ತಿ ಇದ್ದಾರೆ.

ಆ) ಈ ಆಸ್ಪತ್ರೆಯಲ್ಲಿ ನೆಫ್ರಾಲಜಿ ಎಂಬ ಪ್ರತ್ಯೇಕ ವಿಭಾಗ ಇರುವುದಿಲ್ಲ. ದಿನನಿತ್ಯ ವೈದ್ಯಕೀಯ ವಿಬಾಗಕ್ಕೆ (ಮೆಡಿಸಿನ್ ವಿಭಾಗದ) ಬರುವ ಹೊರ ರೋಗಿಗಳನ್ನು ದಿನದ 2 ಗಂಟೆಗಳೂ ನೋಡಲಾಗುವುದು. ಇಂತಹ ರೋಗಿಗಳಲ್ಲಿ ನೆಫ್ರಾಲಜಿ ವಿಭಾಗಕ್ಕೆ ಸಂಬಂಧಪಟ್ಟ ರೋಗಿಗಳನ್ನು ಡಾ. ಸಿದ್ಧರಾಜು ಅಥವಾ ವಿಭಾಗದ ಇತರ ವೈದ್ಯರುಗಳಿಗೆ ತಪಾಸಣೆಗಾಗಿ ಕಳುಹಿಸು ಕೊಡಲಾಗುವುದು.

ಇ) ಇಲ್ಲ.

ಈ) ದಿನಾಂಕ 27.7.94ರಂದು ಪಸ್ತುತ ತಜ್ಞರು ಸಾಂದರ್ಭಿಕ ರಜೆಯಲ್ಲಿದ್ದರು. ದಿನಾಂಕ 3.8.94ರಂದು ಈ ತಜ್ಞರು ಸರ್ಕಾರಿ ಆಸ್ಪತ್ರೆ, ಗುಲ್ಬರ್ಗಾ ಇಲ್ಲಿ ಪರಿಶೀಲನೆಗಾಗಿ ನಿಯೋಜಿಸಲಾಗಿತ್ತು.

ಉ) ಪರಿಶೀಲಿಸಲಾಗುವುದು.

ವಿಷಯ : ಶಿಗ್ಗಾಂವ್ ಸಮುದಾಯ ಆರೋಗ್ಯ ಕೇಂದ್ರವನ್ನು ಮೇಲ್ದರ್ಜೆಗೇರಿಸುವುದರ ಬಗ್ಗೆ

ಚುಕ್ಕೆ ಗುರುತಿನ ಪ್ರಶ್ನೆ ಸಂಖ್ಯೆ 192 (636)

ಶ್ರೀ ಮಂಜುನಾಥ್.ಸಿ. ಕುನ್ನೂರ, (ಶಿಗ್ಗಾಂವ್) :- ಮಾನ್ಯ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

1. ಶಿಗ್ಗಾಂವ್ ಸಮುದಾಯ ಆರೋಗ್ಯ ಕೇಂದ್ರದಲ್ಲಿ ಎಷ್ಟು ಜನ ವೈದ್ಯಾಧಿಕಾರಿಗಳಿದ್ದಾರೆ?

2. ಖಾಲಿ ಇರುವ ವೈದ್ಯಾಧಿಕಾರಿಗಳನ್ನು ಎಂದು ತುಂಬಲಾಗುವುದು ?

3. ಶಿಗ್ಗಾಂವೆ ಸಮುದಾಯ ಆರೋಗ್ಯ ಕೇಂದ್ರವನ್ನು ಜನರಲ್ ಆಸ್ಪತ್ರೆಯನ್ನಾಗಿ 70 ಹಾಸಿಗೆಗಳ ಅಥವಾ 100 ಹಾಸಿಗೆಗಳ ಆಸ್ಪತ್ರೆಯನ್ನು ಮಾಡಲಾಗುವುದೇ ?

4. ಹಾಗಿದ್ದಲ್ಲಿ ಈ ವಿಷಯದಲ್ಲಿ ಕೈಗೊಂಡ ಕ್ರಮಗಳೇನು ?

ಡಾ. ಎ. ಬಿ. ಮಲಕರೆಡ್ಡಿ (ಆರೋಗ್ಯ ಮತ್ತು ಕುಟುಂಬಕಲ್ಯಾಣ ಸಚಿವರು):-

ಅ) ಇಬ್ಬರು ವೈದ್ಯಾಧಿಕಾರಿಗಳಿದ್ದಾರೆ.

ಆ) ವೈದ್ಯರ ಹುದ್ದೆ ಖಾಲಿ ಇರುವುದಿಲ್ಲ.

ಇ) ಪರಿಶೀಲನೆಯಲ್ಲಿದೆ.

ಈ) ಉದ್ಭವಿಸುವುದಿಲ್ಲ.

ವಿಷಯ : ಕುವೆಂಪು ವಿಶ್ವವಿದ್ಯಾಲಯಕ್ಕೆ ಹಣ ಬಿಡುಗಡೆ.

ಚುಕ್ಕೆ ಗುರುತಿನ ಪ್ರಶ್ನೆ ಸಂಖ್ಯೆ : 194 (234)

ಶ್ರೀ. ಡಿ. ಬಿ. ಚಂದ್ರೇಗೌಡ (ತೀರ್ಥಹಳ್ಳಿ) :- ಮಾನ್ಯ ಉನ್ನತ ಶಿಕ್ಷಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಕುವೆಂಪು ವಿಶ್ವವಿದ್ಯಾಲಯಕ್ಕೆ ಸಾಕಷ್ಟು ಪ್ರಮಾಣದಲ್ಲಿ ಸಂಶೋಧನೆ ಮತ್ತು ಇತರ ಬಾಬ್ತುಗಳಿಗೆ ಹಣ ಬಿಡುಗಡೆಯಾಗುತ್ತಿಲ್ಲ ಎಂಬುದು ಸರ್ಕಾರದ ಗಮನಕ್ಕೆ ಬಂದಿದೆಯೇ ;

ಆ) ಬಂದಿದ್ದರೆ ಸರ್ಕಾರ ಯಾವ ಕ್ರಮಗಳನ್ನು ಕೈಗೊಂಡಿದೆ.

ಶ್ರೀ. ಎಸ್. ಎಂ. ಯಾಹ್ಯ (ಉನ್ನತ ಶಿಕ್ಷಣ ಸಚಿವರು) :-

ಅ) ಇಲ್ಲ

ಆ) ಉದ್ಭವಿಸುವುದಿಲ್ಲ

ದಿನಾಂಕ : 7.9.94 ಚುಕ್ಕೆ ಗುರುತಿಲ್ಲದ ಪ್ರಶ್ನೋತ್ತರಗಳು.

ವಿಷಯ : ಬೆಳಗಾಂ ಜಿಲ್ಲೆ ಬೈಲಹೊಂಗಲ ತಾಲ್ಲೂಕಿನ ಕೆಲವು ಹಳ್ಳಿಗಳಲ್ಲಿನ ಮೀನುಗಾರರಿಗೆ ಮನೆಗಳನ್ನು ಕಟ್ಟಿಸಿಕೊಡುವ ಬಗ್ಗೆ.

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ : 465 (777)

ಶ್ರೀ. ಶಿವಾನಂದ ಹೆಚ್. ಕೌಜಲಗಿ (ಬೈಲಹೊಂಗಲ):- ಮಾನ್ಯ ಮೀನುಗಾರಿಕೆ ಮತ್ತು ಬಂದರು ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ ?

ಅ) ಬೆಳಗಾಂ ಜಿಲ್ಲೆ ಬೈಲಹೊಂಗಲ ತಾಲ್ಲೂಕಿನ ಕೆಂಗಾನೂರ್ ಹಾಗೂ ಸವದತ್ತಿ ತಾಲ್ಲೂಕಿನ ಮಾಟೊಳ್ಳಿ ಹಾಗೂ ಎಕ್ಕುಂಡಿ ಗ್ರಾಮಗಳಲ್ಲಿ ಮೀನುಗಾರರಿಗೆ ಮನೆಗಳನ್ನು ಕಟ್ಟಲು ಸರ್ಕಾರ ಜಿಲ್ಲಾ ಪರಿಷತ್ತಿಗೆ ಎಷ್ಟು ಹಣ ಬಿಡುಗಡೆ ಮಾಡಿದೆ.

ಆ) ಇದರಲ್ಲಿ ರಾಜ್ಯ ಸರ್ಕಾರದ ವಂತಿಗೆ ಎಷ್ಟು ಹಾಗೂ ಕೇಂದ್ರ ಸರ್ಕಾರದ ವಂತಿಗೆ ಎಷ್ಟು:

ಇ) ಇನ್ನು ಪೂರ್ಣ ಹಣ ಬಿಡುಗಡೆ ಮಾಡಿಲ್ಲದಿರುವುದು ನಿಜವೆ : ಹಾಗಿದ್ದಲ್ಲಿ ಉಳಿದ ಹಣ ಬಿಡುಗಡೆ ಮಾಡಲು ಕೂಡಲೇ ಕ್ರಮ ಕೈಗೊಳ್ಳಲಾಗುವುದೇ ;

ಈ) ಮೀನುಗಾರರಿಗೆ ಮನೆಗಳು ಹಂಚಲು ಫಲಾನುಭವಿಗಳನ್ನು ಆರಿಸಲಾಗಿದೆಯೇ : (ಆರಿಸಲಾಗಿದ್ದಲ್ಲಿ ಅವರ ಹೆಸರನ್ನು ಒದಗಿಸುವುದು).